**ಸಾಕ್ಷಿಗೆ ದಿನಾಂಕ 19.12.2025 ರಂದು -ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: 2 ನೇ ಎದುರುದಾರರ ಪರ ಶ್ರೀ. ವಿ ಎಸ್ ಎನ್ ವಕೀಲರಿಂದಃ**

1. ಅಪಘಾತವಾದ 2 ದಿನದ ನಂತರ ನನ್ನ ಅಳಿಯ ದೂರು ನೀಡಿರುತ್ತಾರೆ. ದೂರಿನಲ್ಲಿ ನಮೂದಾಗಿರುವ ಅಂಶ ನನಗೆ ಗೊತ್ತಿರುತ್ತದೆ. ಅಪಘಾತದ ದಿನ ನಾವು ಕಮ್ಮದಟ್ಟಿಯಿಂದ ತಂಬಿಹಳ್ಳಿಗೆ ಹೋಗುತ್ತಿದ್ದೆನು. ನಾವು ಪ್ರಯಾಣಿಸುತ್ತಿದ್ದ ದ್ವಿಚಕ್ರ ವಾಹನ ನಮಗೆ ಸೇರಿದ್ದಾಗಿರುತ್ತದೆ, ಅದು ಹೊಸದಾಗಿದ್ದ ಕಾರಣ ನೋಂದಣಿ ಆಗಿರುವುದಿಲ್ಲ. ಸದರಿ ವಾಹನಕ್ಕೆ ವಿಮಾ ಪಾಲಿಸಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ವಿಮಾ ಪಾಲಿಸಿಯನ್ನು ಹಾಜರು ಪಡಿಸುತ್ತೇನೆ. ಅಪಘಾತವಾದ ಎಷ್ಟು ದಿನಗಳ ನಂತರ ದ್ವಿಚಕ್ರ ವಾಹನವನ್ನು ನೋಂದಣಿ ಮಾಡಿರುತ್ತೇವೆ ಎಂದು ನನಗೆ ಗೊತ್ತಿರುವುದಿಲ್ಲ. ದ್ವಿಚಕ್ರ ವಾಹನದ ಆರ್ ಸಿ ಪುಸ್ತಕ ನನ್ನ ಮಗಳ ಹೆಸರಿನಲ್ಲಿರುತ್ತದೆ ಅದನ್ನು ಹಾಜರು ಪಡಿಸಲು ಪ್ರಯತ್ನಿಸುತ್ತೇನೆ. ಪೊಲೀಸ್ ಠಾಣೆಯಿಂದ ಸದರಿ ದ್ವಿಚಕ್ರ ವಾಹನವನ್ನು ಯಾರು ಬಿಡಿಸಿಕೊಂಡಿದ್ದರು ಎಂದರೆ ನನ್ನ ಪತಿಗೆ ಗೊತ್ತಿರುತ್ತದೆ.

2. ನಾನು ಎಸ್ ಎಸ್ ಎಲ್ ಸಿ ವರೆಗೆ ಓದಿರುತ್ತೇನೆ. ನೋಂದಣಿಯಾಗದೇ ಇರುವ ವಾಹನವನ್ನು ಬಳಕೆ ಮಾಡಬಾರದು ಎಂದು ಗೊತ್ತಿದೆಯಾ ಎಂದರೆ ಗೊತ್ತಿಲ್ಲ. ನಾನು ಹಾಜರು ಮಾಡಿರುವ ಪೊಲೀಸ್ ದಾಖಲೆಗಳ ಬಗ್ಗೆ ನನಗೆ ಗೊತ್ತಿರುತ್ತದೆ. ಆಸ್ಪತ್ರೆಯಲ್ಲಿ ಅಪಘಾತದ ಬಗ್ಗೆ ನಾನೇ ಮಾಹಿತಿ ನೀಡಿರುತ್ತೇನೆ. ಆಸ್ಪತ್ರೆಯವರು ನನ್ನ ಹೇಳಿಕೆಯನ್ನು ಬರೆದುಕೊಂಡಿರುತ್ತಾರೆ. ಅಪಘಾತದ ದಿನ ದ್ವಿಚಕ್ರ ವಾಹನವನ್ನು ನನ್ನ ಮಗಳು ಚಲಾಯಿಸುತ್ತಿದ್ದಳು ನಾನು ಚಲಾಯಿಸುತ್ತಿರಲಿಲ್ಲ. ನನಗೆ ದ್ವಿಚಕ್ರ ವಾಹನ ಚಲಾಯಿಸಲು ಚಾಲನ ಪರವಾನಗಿ ಪತ್ರ ಇರುವುದಿಲ್ಲ. ನಿ.ಪಿ.18-ಡಿಸ್ಚಾರ್ಜ್ ಸಮ್ಮರಿಯಲ್ಲಿ ನನ್ನ ಮಗಳು ಹಿಂಬದಿ ಸವಾರಳಾಗಿ ಹೋಗಿತ್ತಿದ್ದಳು ಎಂದು ನಮೂದಾಗಿದೆ ಎಂದರೆ ಸರಿಯಲ್ಲ. ನಿ.ಪಿ.1, 2 ಮತ್ತು 6 ರಲ್ಲಿ ನನ್ನ ಮಗಳು ಹಿಂಬದಿ ಸವಾರಳಾಗಿದ್ದೆನು, ನಾನು

ಅನೋಂದಾಯಿತ ದ್ವಿಚಕ್ರ ವಾಹನವನ್ನು ಚಲಾಯಿಸುತ್ತಿದ್ದೇನು ಎಂದು ನಮೂದಾಗಿದೆ ಎಂದರೆ ಸರಿಯಲ್ಲ. ದೋಷಾರೋಪಣಾಪಟ್ಟಿಯಲ್ಲಿ ದ್ವಿಚಕ್ರ ವಾಹನವನ್ನು ನಾನೇ ಚಾಲನೇ ಮಾಡುತ್ತಿದ್ದೆ ಎಂದು ನಮೂದು ಮಾಡಿದ್ದಾರೆ ಎಂದರೆ ಸರಿಯಲ್ಲ. ನನಗೆ ಚಾಲನಾ ಪರವಾನಗಿ ಪತ್ರ ಇಲ್ಲದ ಕಾರಣ 2 ದಿನ ತಡವಾಗಿ ದೂರು ನೀಡಿದ್ದೇವೆ ಎಂದರೆ ನಾನು ಸುಧಾರಿಸಿದ ನಂತರ ನನ್ನ ಅಳಿಯ ದೂರು ನೀಡಿರುತ್ತಾರೆ.

3. ಅಪಘಾತವು ಕೊಲಾರ-ಮುಳಬಾಗಿಲು ಹೆದ್ದಾರಿಯಲ್ಲಿ ಆಗಿದೆ ಎಂದರೆ ಸರಿ. ಕಮ್ಮದಟ್ಟಿಯಿಂದ ತಂಬಿಹಳ್ಳಿಗೆ ಸದರಿ ರಾಷ್ಟ್ರೀಯ ಹೆದ್ದಾರಿಯನ್ನು ದಾಟಿ ಹೋಗಬೇಕು ಎಂದರೆ ಸರಿ. ಅಪಘಾತವು ಮಧ್ಯಾಹ್ನ 1.30 ಗಂಟೆಗೆ ಆಗಿದೆ ಎಂದರೆ ಸರಿ. ಕಮ್ಮದಟ್ಟಿಯಿಂದ ತಂಬಿಹಳ್ಳಿಗೆ ಹೋಗುವ ರಸ್ತೆ ಚಿಕ್ಕ ಹಳ್ಳಿರಸ್ತೆ ಎಂದರೆ ಸರಿ. ಸದರಿ ರಸ್ತೆಯಲ್ಲಿ ಯಾವುದೇ ಸಂಚಾರಿ ದೀಪಗಳು ಇರಲಿಲ್ಲ. ಅಪಘಾತದ ಸ್ಥಳದಲ್ಲಿ ರಸ್ತೆ ಉಬ್ಬು ಮತ್ತು ಪಾದಚಾರಿ ಮಾರ್ಗ ಇರಲಿಲ್ಲ. ಅಪಘಾತದ ವೇಳೆಯಲ್ಲಿ ನಾನು ಮತ್ತು ನನ್ನ ಮಗಳು ಶಿರಸ್ತ್ರಾಣ ಧರಿಸಿರಲಿಲ್ಲ ಎಂದರೆ ಸರಿಯಲ್ಲ. ಹೆದ್ದಾರಿ ರಸ್ತೆ ಸಂಚಾರ ದಟ್ಟಣೆ ಹೊಂದಿರಲಿಲ್ಲ. ಸಂಚಾರ ದಟ್ಟಣೆ ಇಲ್ಲದ ಕಾರಣ ಈ ಕಡೆಯಿಂದ ಆ ಕಡೆಗೆ ರಸ್ತೆ ದಾಟುತ್ತಿದ್ದೆವು ಎಂದರೆ ದ್ವಿಚಕ್ರ ವಾಹನವನ್ನು ನಿಲ್ಲಿಸಿದ್ದೆವು. ಅಪಘಾತದ ರಸ್ತೆಯ ಮಧ್ಯೆ ವಿಭಜಕ ಇದೆ ಯೂ ಟರ್ನ್ ತೆಗೆದುಕೊಳ್ಳಲು ಅವಕಾಶ ಇದೆ ಎಂದರೆ ಸರಿ. ವಿಭಜಕನ ಪಕ್ಕದಲ್ಲಿ ಅಪಘಾತವಾಗಿದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 1 ನೇ ಎದುರುದಾರರ ವಾಹನದ ಚಾಲಕನು ಅತಿವೇಗವಾಗಿ ವಾಹನ ಚಲಾಯಿಸಿಕೊಂಡು ಬಂದು ನಿಯಂತ್ರಣ ತಪ್ಪಿ ನಮಗೆ ಡಿಕ್ಕಿ ಪಡಿಸಿರುತ್ತಾರೆ ಎಂದು ನುಡಿಯುತ್ತಾರೆ. ಕಚ್ಚಾ ನಕಾಶೆಯನ್ನು ಹಾಜರು ಪಡಿಸುವಿರಾ ಎಂದರೆ ಪ್ರಯತ್ನಿಸುತ್ತೇನೆ. ನಾನು ಬರುತ್ತಿದ್ದ ವಾಹನಗಳನ್ನು ಗಮನಿಸದೇ ಏಕಾಏಕಿ ರಸ್ತೆ ದಾಟಲು ಪ್ರಯತ್ನಿಸಿದ ಕಾರಣ ನನ್ನ ತಪ್ಪಿನಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ.

4. ನನ್ನ ತಪ್ಪಿನಿಂದ ಅಪಘಾತವಾಗಿರುವ ಕಾರಣ 2 ದಿನಗಳು ತಡವಾಗಿ 1 ನೇ ಎದುರುದಾರರ ಕಾರಿನ ಚಾಲಕನ ವಿರುದ್ಧ ಸುಳ್ಳು ದೂರು ನೀಡಿರುತ್ತೇವೆ ಎಂದರೆ ಸರಿಯಲ್ಲ. ಕಾರಿನ ಚಾಲಕನ

ತಪ್ಪಿನಿಂದ ಅಪಘಾತವಾಗಿಲ್ಲ ಎಂದರೆ ಸರಿಯಲ್ಲ. ಅಪಘಾತದ ನಂತರ ಮೊದಲು ಜಾಲಪ್ಪ ಆಸ್ಪತ್ರೆಗೆ ದಾಖಲಾಗಿ ಪ್ರಥಮ ಚಿಕಿತ್ಸೆ ಪಡೆದು ಹಾಸ್ಮಟ್ ಆಸ್ಪತ್ರೆಗೆ ದಾಖಲಾಗಿರುತ್ತೇವೆ. ನನಗೆ ಶಸ್ತ್ರಚಿಕಿತ್ಸೆ ಆಗಿರುತ್ತದೆ. ಆ ಆಸ್ಪತ್ರೆಯನ್ನು ಹೊರತು ಪಡಿಸಿ ಬೇರೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುವುದಿಲ್ಲ. ನನಗೆ ಚಿಕಿತ್ಸೆ ನೀಡಿದ ವೈದ್ಯರ ಹೆಸರು ನೆನಪಿರುವುದಿಲ್ಲ. ಒಳಜೋಡಣೆಯನ್ನು ಅಳವಡಿಸಿರುತ್ತಾರೆ.

5. ನನ್ನ ಜನ್ಮ ದಿನಾಂಕ 22.05.1976. ನಾನು ಟೈಲರಿಂಗ್ ಉದ್ಯೋಗ ಮಾಡಿ ತಿಂಗಳಿಗೆ 30 ಸಾವಿರ ಸಂಪಾದಿಸುತ್ತಿದ್ದೆ ಎಂದು ತೋರಿಸಲು ದಾಖಲೆಗಳು ಇರುವುದಿಲ್ಲ ಎಂದರೆ ಸರಿ. ಪೊಲೀಸ್ ದಾಖಲೆಗಳಲ್ಲಿ ನನ್ನ ವೃತ್ತಿಯ ಬಗ್ಗೆ ನಮೂದು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಪ್ರಸ್ತುತ ನನಗೆ ಯಾವುದೇ ತೊಂದರೆ ಇಲ್ಲ ಆರೋಗ್ಯವಾಗಿದ್ದೇನೆ ಎಂದರೆ ಸರಿಯಲ್ಲ. ನನ್ನ ವೈದ್ಯಕೀಯ ಖರ್ಚು 10 ಲಕ್ಷ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಸ್ಪತ್ರೆಯವರ ಜೊತೆ ಶಾಮೀಲಾಗಿ ಹೆಚ್ಚಿನ ಮೊತ್ತದ ಬಿಲ್ಲುಗಳನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮುಂದುವರೆದ ಚಿಕಿತ್ಸೆಗೆ 5 ಲಕ್ಷ ಖರ್ಚಾಗುತ್ತದೆ ಎಂದು ತೋರಿಸಲು ದಾಖಲೆ ಹಾಜರು ಮಾಡಿರುವುದಿಲ್ಲ ಎಂದರೆ ಸರಿ. ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1ನೇ ಎದುರುದಾರರು ಏಕಪಕ್ಷೀಯ. ಈ ಕಾರಣದಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಗಿರುತ್ತದೆ.**

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**

**(ಓ. ಹೇ. ಕೇ. ಸ.ಇ)**

**3ನೇ ಹೆಚ್ಚುವರಿ ಲಘು ವ್ಯವಹಾರಗಳ**
**ನ್ಯಾಯಾಧೀಶರು, ಬೆಂಗಳೂರು.**